# "ಬೇಕಾದದ್ದು ಮನೆಯೊಳಗೇ ಇದೆ; ಆದರೆ ಹುಡುಕಾಡಿದ್ದು ಎಲ್ಲೆಲ್ಲೋ!"

**ತೀರಾ** ಸಾಮಾನ್ಯವಾಗಿ ನಮ್ಮನ್ನು ಕಾಡುವ ಆತಂಕಗಳಲ್ಲೂ ಆಧ್ಯಾತ್ಮಿಕ ಪಾಠಗಳು ಹೇಗೆ ಅವಿಭಾಜ್ಯ ಅಂಗವಾಗಿರುತ್ತವೆ, ಏನಿದ್ದರೂ ಆ ಪಾಠಗಳನ್ನು ಗ್ರಹಿಸಲು ಶುದ್ಧವಾದ ಅಂತಃಕರಣ ಇರಬೇಕು ಅಷ್ಟೇ, ಎಂದು ತಿಳಿಸಿಕೊಡುವ ಒಂದು ಪ್ರಸಂಗವನ್ನು ಶ್ರೀಮಾತೆಯವರನ್ನು ಕಾಣಲು ಹೋದ ಭಕ್ತನೊಬ್ಬನು ಹೀಗೆ ದಾಖಲಿಸಿದ್ದಾನೆ.

ಶ್ರೀಮಾತೆ ಶಾರದಾದೇವಿಯವರು ಜಯರಾಮಬಟಿಯಲ್ಲಿದ್ದ ಸಮಯ. ಒಂದು ವರ್ಷ ಅವರ ಮನೆಯಲ್ಲಿ ಜಗದ್ಧಾತ್ರಿ ಪೂಜೆ ನಡೆಯಿತು. ಆಗ ಒಬ್ಬ ಭಕ್ತ ಅದರಲ್ಲಿ ಪಾಲ್ಗೊಳ್ಳಲು ಬಹು ದೂರದಿಂದ ಬಂದ. ಅನಿವಾರ್ಯ ಕಾರಣಗಳಿಂದ ಆತ ಬರುವುದು ತಡವಾಗಿ, ಪೂಜೆಯ ಹಿಂದಿನ ದಿನ ಮಧ್ಯಾಹ್ನ ಜಯರಾಮಬಟಿಗೆ ಬಂದ. ದೇವಿಯನ್ನು ಮಹಾ ಉತ್ಸವಕ್ಕೆ ಸ್ವಾಗತಿಸುವ ವಿಧಿಗಳಾದ "ಆಮಂತ್ರಣ" "ಅಧಿವಾಸ" ಪೂಜೆಯ ಹಿಂದಿನ ದಿನ ಸಂಜೆ ನಡೆಯಬೇಕಿತ್ತು ಹಾಗೂ ಮಾರನೆಯ ದಿನ ಬೆಳಗಿನ ಜಾವವೇ ಪೂಜೆಯ ಪ್ರಾರಂಭ. ದೇವಿಯ ವಿಗ್ರಹವನ್ನು ಚೆನ್ನಾಗಿ ಅಲಂಕರಿಸಿದ್ದರು. ಭಕ್ತ ಶ್ರೀಮಾತೆಯವರನ್ನು ಭೇಟಿಮಾಡಿ ನಮಸ್ಕರಿಸಿದ. ಅವರೂ ಕೂಡ ಆತನನ್ನು ಸಂತೋಷದಿಂದ ಬರಮಾಡಿಕೊಂಡು ಆತನ ಕ್ಷೇಮ ಸಮಾಚಾರವನ್ನು ವಿಚಾರಿಸಿ, ಮಾಡಲು ಬೇಕಾದಷ್ಟು ಕೆಲಸವಿದ್ದದ್ದರಿಂದ ಕೆಲಸಗಳಲ್ಲಿ ಮುಳುಗಿ ಹೋದರು.

ರಾತ್ರಿಯಾದಾಗ ಮನೆಯಲ್ಲಿರುವವರೆಲ್ಲಾ ಯಾವುದೋ ಕಾರಣಕ್ಕಾಗಿ ಚಿಂತಿತರಾಗಿರುವಂತೆ ಕಂಡಿತು. ಶ್ರೀಮಾತೆಯವರನ್ನು ಸುತ್ತುವರಿದು ಕೆಲವರು ಮ್ಲಾನವದನರಾಗಿ ನಿಂತಿದ್ದರು. ತರತರಹದ ಉಪಾಯಗಳನ್ನು ಸೂಚಿಸಿ, ನಂತರ ಚರ್ಚಿಸುತ್ತಿದ್ದರು. ಶ್ರೀಮಾತೆಯವರೂ ಕೂಡ ವ್ಯಸ್ತರಾದಂತಿದ್ದು ನೆಲವನ್ನೇ ನೋಡುತ್ತಾ ಕುಳಿತಿದ್ದರು. ಕಡೆಗೆ ಅಲ್ಲಿ ನೆರೆದಿದ್ದವರ ಮಾತುಗಳ ತುಣುಕುಗಳಿಂದ ತಿಳಿದು ಬಂತು: ಬೆಳಗಿನ ಪೂಜೆಗೆ ಅಗತ್ಯವಾಗಿ ಬೇಕಾಗಿದ್ದ ಮಾಗಿದ ಬಾಳೆಹಣ್ಣು ಇರಲಿಲ್ಲ! ಪೂಜೆಯ ವೇಳೆಗೆ ಹಣ್ಣಾಗಬಹುದೆಂಬ ನಿರೀಕ್ಷೆಯಿಂದ ಒಂದು ಹಸಿರು ಗೊನೆಯನ್ನೇನೊ ತಂದಿದ್ದರು. ಆದರೆ ಅದರಲ್ಲಿ ಒಂದೂ ಹಣ್ಣಾಗಿರಲಿಲ್ಲ. ಬೆಳಗಿನ ಪೂಜೆಗೆ ಬೇಕಾದ ಮೊದಲನೆಯ ವಸ್ತುವೇ ಬಾಳೆಹಣ್ಣು; ಅದಿಲ್ಲದೆ ಪೂಜೆ ಪ್ರಾರಂಭವಾಗುವಂತಿರಲಿಲ್ಲ. ಜಯರಾಮಬಟಿಯಲ್ಲಿ ಯಾರ ಹತ್ತಿರವೂ ಬಾಳೆ ಹಣ್ಣು ಇರಲಿಲ್ಲ. ಅಲ್ಲದೆ, ಹತ್ತಿರದ ಹಳ್ಳಿಗಳಲ್ಲಿಯೂ ಅದು ದೊರೆಯುವ ಭರವಸೆ ಇರಲಿಲ್ಲ. ಎಲ್ಲರೂ ನಿರಾಶೆ ಕವಿದಂತಿದ್ದರು. ಕೊಯಲ್‌ಪಾಡದ ಸಾಧು ಒಬ್ಬರು ಅಲ್ಲಿನ ತೋಟದಿಂದ ಹಣ್ಣು ಸಿಗಬಹುದೆಂದು ಹೇಳಿದರು. ಅಲ್ಲಿನ ನಿವಾಸಿಯೊಬ್ಬ ಬಾಳೆತೋಟ ಮಾಡಿದ್ದನಲ್ಲದೆ ಹಣ್ಣುಗಳನ್ನು ಮಾರುಕಟ್ಟೆಗೆ ಸರಬರಾಜು ಮಾಡುತ್ತಿದ್ದ. ಈ ಸುದ್ದಿ ಎಲ್ಲರಲ್ಲೂ ಭರವಸೆಯ ಕಿರಣ ಮೂಡಿಸಿತು. ಆದರೆ ಕತ್ತಲಲ್ಲಿ ಅಲ್ಲಿಗೆ ಹೋಗುವವರಾರು? ಆಗಲೇ ರಾತ್ರಿ ೯ ಘಂಟೆಯಾಗಿತ್ತು. ಈ ರಾತ್ರಿಯಲ್ಲಿ ಎಂಟು ಮೈಲಿ ನಡೆದು ಹೋಗಿ ಮತ್ತೆ ಅಷ್ಟೇ ದೂರ ತಿರುಗಿ ಬರುವುದು ಕಡಿಮೆ ಕಷ್ಟದ ಕೆಲಸವೇ?

ಮೇಲೆ ತಿಳಿಸಿದ ಅತಿಥಿಯಾಗಿ ಬಂದಿದ್ದ ಭಕ್ತ ಧೈರ್ಯಶಾಲಿ ಯುವಕನಾಗಿದ್ದ. ಅದೇ ಸ್ಥಳದ ಯುವಕನೊಬ್ಬನನ್ನು ಜೊತೆಗೆ ಕರೆದುಕೊಂಡು ಕೊಯಲ್‌ಪಾಡಕ್ಕೆ ಹೋಗಿ ಬಾಳೆಹಣ್ಣು ತರಲು ಮುಂದಾದ. ಈಗ ಶ್ರೀಮಾತೆಯವರಿಗೆ ಸ್ವಲ್ಪ ನೆಮ್ಮದಿಯೆನಿಸಿತು. ಅವರಿಗೆ ನಮಸ್ಕರಿಸಿ ಆಶೀರ್ವಾದ ಪಡೆದು ಇಬ್ಬರು ಯುವಕರೂ ಹೊರಟರು. ದಾರಿಯಲ್ಲಿ ದೇಸ್ರಾ ಎಂಬ ಗ್ರಾಮದ ಬಳಿ ಬಂದಾಗ, ಅಲ್ಲಿನ ನಾಯಿಗಳು ಬೊಗಳುತ್ತಾ ಅವರನ್ನು ಅಟ್ಟಿಸಿಕೊಂಡು ಬಂದವು. ಆಗ ಅಲ್ಲಿನ ಕೆಲವು ನಿವಾಸಿಗಳು ಬಂದು ನಾಯಿಗಳನ್ನು ಓಡಿಸಿ, ಅವರಿಗೆ ಮುಂದಿನ ದಾರಿ ತೋರಿಸಿದರು.

ಆ ಯುವಕರು ಕೊಯಲ್‌ಪಾಡ ತಲುಪಿದಾಗ ರಾತ್ರಿ ಬಹಳ ಹೊತ್ತಾಗಿತ್ತು. ನಿದ್ರೆಯಲ್ಲಿದ್ದ ಆಶ್ರಮವಾಸಿಗಳನ್ನು ಎಬ್ಬಿಸಿದರು. ಅವರಿಗೂ ಈ ಮಧ್ಯ ರಾತ್ರಿಯಲ್ಲಿ ಬಂದವರನ್ನು ಕಂಡು ಆಶ್ಚರ್ಯವಾಯಿತು. ಅವರು ಬಂದ ಕಾರಣ ತಿಳಿದಾಗ ದುಃಖವೂ ಆಯಿತು. ಏಕೆಂದರೆ ಕೊಯಲ್‌ಪಾಡದ ಆಶ್ರಮದಿಂದಲೇ ಬಾಳೇ ಹಣ್ಣುಗಳನ್ನು ಕಳಿಸಿದ್ದರೂ ಅವೂ ಸಹ ಇನ್ನೂ ಮಾಗಿರಲಿಲ್ಲ. ತಕ್ಷಣವೇ ಮಾಗಿದ ಹಣ್ಣನ್ನು ತರಲು ಕೆಲವರು ತೋಟಕ್ಕೆ ಹೊರಟರು. ಆದರೆ ಅವರ ಪ್ರಯತ್ನವೂ ಫಲಿಸಲಿಲ್ಲ. ಯುವಕರಿಬ್ಬರೂ ನಿರಾಸೆಯಿಂದ ರಾತ್ರಿಯನ್ನು ಕೊಯಲ್‌ಪಾಡದಲ್ಲಿ ಕಳೆದು ಮರುದಿನ ಬೆಳಿಗಿನ ಜಾವ ಬರಿಗೈನಲ್ಲಿ ವಾಪಸು ಜಯರಾಮಬಟಿಗೆ ಬಂದರು. ಇದರಿಂದ ಎಲ್ಲರ ದುಗುಡ ಇನ್ನೂ ಹೆಚ್ಚಾಯಿತು. ಬಾಳೆಹಣ್ಣು ಇಲ್ಲದೆ ಪೂಜೆ ಹೇಗೆ ಪ್ರಾರಂಭಿಸುವುದು?

ಆಗ ಭಕ್ತನಿಗೆ ತಾನು ಜಯರಾಮಬಟಿಗೆ ಬರುವಾಗ ಕೆಲವು ಬಾಳೆಹಣ್ಣುಗಳನ್ನು ತಂದಿದ್ದ ನೆನಪಾಯಿತು. ಆದರೆ ಅವನು ಹಿಂದಿನ ದಿನ ಬಂದಾಗ ಶ್ರೀಮಾತೆಯವರು ಕೆಲಸದ ಗಡಿಬಿಡಿಯಲ್ಲಿದ್ದುದರಿಂದ ಆತ ತನ್ನ ಕೈಚೀಲದಿಂದ ಬಾಳೆಹಣ್ಣುಗಳಿದ್ದ ಪೊಟ್ಟಣವನ್ನೇ ಹೊರಕ್ಕೆ ತೆಗೆದಿರಲಿಲ್ಲ. ಪೂಜೆಯ ನಂತರ ಶ್ರೀಮಾತೆಯವರು ಬಿಡುವಿನಲ್ಲಿದ್ದಾಗ ಅದನ್ನು ಅವರಿಗೆ ಅರ್ಪಿಸುವುದೆಂದು ಯೋಚಿಸಿದ್ದ. ಏಕೆಂದರೆ ಆ ಬಾಳೆಹಣ್ಣುಗಳು ದೊಡ್ಡವಾಗಿದ್ದರೂ, ಸಾಮಾನ್ಯ ಜಾತಿಯದಾಗಿದ್ದು ಯಾರೂ ಅವನ್ನು ಮೆಚ್ಚುವಂತಿರಲಿಲ್ಲ. ತಾನು ಬೆಳೆಸಿದ ಮರದಲ್ಲಿ

ಬೆಳೆದ ಹಣ್ಣುಗಳೆಂಬ ವಿಶೇಷ ಮಮತೆಯಿಂದಷ್ಟೇ ಅವುಗಳನ್ನು ತಂದಿದ್ದ. ಮೇಲಾಗಿ ಅವುಗಳನ್ನು ಕೈಚೀಲದಲ್ಲಿ ಇಡುವಾಗ, ಅವೂ ಸಹ ಇನ್ನೂ ಮಾಗದ ಹಸಿರು ಕಾಯಿಗಳಾಗಿದ್ದವು. ಈಗ ಇಷ್ಟೆಲ್ಲಾ ಹುಡುಕಾಟದ ನಂತರವೂ ಮಾಗಿದ ಬಾಳೆಹಣ್ಣು ಸಿಗದಾದಾಗ, ತಾನು ತಂದಿದ್ದ ಬಾಳೆಹಣ್ಣು ನೆನಪಾಗಿ, ಚೀಲದಿಂದ ಬಾಳೆಹಣ್ಣುಗಳ ಪೊಟ್ಟಣ ತೆಗೆದ. ಆಶ್ಚರ್ಯ! ಅವುಗಳೆಲ್ಲಾ ಹಣ್ಣಾಗಿದ್ದವು. ಕೆಲವು ತುಸು ಮೆತ್ತಗಾಗಿದ್ದವು. ಅವುಗಳನ್ನು ಶ್ರೀಮಾತೆಯವರ ಬಳಿಗೆ ತಂದಾಗ, ಅವನ್ನು ನೋಡುತ್ತಲೇ ಶ್ರೀಮಾತೆಯವರು ಆನಂದದಿಂದ, "ಅರೆ, ನೋಡು, ತಾಯಿ (ದೇವಿ) ಅವಳ ಪೂಜೆಗೆ ಅವಳೇ ಹೇಗೆ ವ್ಯವಸ್ಥೆ ಮಾಡುತ್ತಾಳೆ! ನಾವು ವಿನಾ ಕಾರಣ ಕೊರಗುತ್ತಿದ್ದೆವು" ಎಂದರು. ಭಕ್ತ ಎಲ್ಲವನ್ನೂ ವಿವರಿಸಿದ ನಂತರ, ಅವರು ಆ ಹಣ್ಣುಗಳನ್ನು ಕೈಯಲ್ಲಿ ತೆಗೆದುಕೊಂಡು ಪರೀಕ್ಷಿಸಿ, ಅವು "ಕೋಟರ್" ಜಾತಿಯ ಬಾಳೆಹಣ್ಣುಗಳೆಂದು ಗುರುತಿಸಿ ಅವು ಪೂಜೆಗೆ ಅರ್ಹವಾದುವೆಂದು ತಿಳಿಸಿದರು. ಸನ್ನಿವೇಶಗಳು ಹೀಗೆ ತಿರುವು ಪಡೆದದ್ದರಿಂದ ಶ್ರೀಮಾತೆಯವರಿಗೆ ಬಹಳ ಸಮಾಧಾನವಾಯಿತು. ಭಕ್ತರ ಹೃದಯವೂ ಸಹ ಆನಂದದಿಂದ ತುಂಬಿತು.

ಹರ್ಷದುಂಬಿದ ಮನದಿಂದ ಮಂದಹಾಸ ವದನರಾಗಿ ಶ್ರೀಮಾತೆಯವರು ಭಕ್ತನನ್ನು ಕುರಿತು "ನಮ್ಮ ಪರಿಸ್ಥಿತಿ **'ಬೇಕಾದದ್ದು ಮನೆಯಲ್ಲಿಯೇ ಇದೆ; ಆದರೆ ಹುಡುಕಿದ್ದು ಎಲ್ಲೆಲ್ಲೋ!'** ಎಂಬಂತಿದೆ" ಎಂದರು. ಸ್ವಲ್ಪಕಾಲದ ನಂತರ ಅದೇ ಮಾತನ್ನು ಮತ್ತೆ ಮತ್ತೆ ನೆನಸಿಕೊಂಡು ನಗುತ್ತಾ ಉದ್ಗರಿಸುತ್ತಿದ್ದರು—"ಬೇಕಾದದ್ದು ಮನೆಯೊಳಗೇ ಇದೆ. ಆದರೆ ಹುಡುಕಿದ್ದು ಎಲ್ಲೆಲ್ಲೋ!" ಹೀಗೆ ಹೇಳಿದಾಗ ಅವರ ದೃಷ್ಟಿ ಆಳವಾಗಿ ದಿಗಂತದಲ್ಲಿ ನೆಟ್ಟಿತ್ತು. ಬಾಹ್ಯದ ಪರಿವೆಯೇ ಅವರಿಗೆ ಇರಲಿಲ್ಲ. ಭಕ್ತನೂ ಕೂಡ, ಅವರ ಮಾತನ್ನು ಕೇಳುತ್ತಾ ಮೂಕನಂತಾದ. ಶ್ರೀಮಾತೆಯವರ ಸೂಚನಾತ್ಮಕ ಉದ್ಗಾರದ ಅಂತರಾರ್ಥವೇನಿರಬಹುದೆಂದು ಭಾವಿಸುತ್ತಾ ಮಾತೆಯವರಿಗೆ ಪ್ರಣಾಮ ಮಾಡಿ ಹೊರಗೆ ಬಂದನು.

**ಸಂಗ್ರಹ : ಎನ್. ಗೋಪೀನಾಥ**

(ಆಧಾರ : *The Mother As I Saw Her* ಸ್ವಾಮಿ ಶಾರದೇಶಾನಂದ, ರಾಮಕೃಷ್ಣ ಮಠ, ಚೆನ್ನೈ)

# ಪ್ರಹಸನ ಪ್ರಸಂಗ

ಕೀರ್ತಿ ಪ್ರತಿಷ್ಠೆಗಳ ಆಸೆ ಅತಿರೇಕಕ್ಕೆ ಹೋದಾಗ ಕೆಲವರು ಇಲ್ಲಸಲ್ಲದ ಕೀರ್ತಿಯನ್ನೂ ತಮ್ಮ ಮೇಲೆ ಆರೋಪಿಸಿಕೊಂಡು ಅದರಲ್ಲೇ ಒಂದು ಆಂತರಿಕ ತೃಪ್ತಿಯನ್ನು ಪಡೆಯುತ್ತಾರೆ. ಕೆಲವೊಮ್ಮೆ ಅವರು ಇತರರ ಪ್ರತಿಷ್ಠೆಯ ಆಶ್ರಯದಲ್ಲಿ ತಮ್ಮ ಪ್ರತಿಷ್ಠೆಯನ್ನು ಮೆರೆಯಲು ಪ್ರಯತ್ನಿಸುತ್ತಾರೆ. ಇದು ಆಂತರಿಕ ಖಾಲಿತನವನ್ನು ಸೂಚಿಸುತ್ತದೆ.

ಇಬ್ಬರು ಸರ್ದಾರ್ಜಿ ಇರುತ್ತಾರೆ. ಅವರ ಹೆಸರು ಸಂತ ಸಿಂಗ್ ಮತ್ತು ಬಂಟ ಸಿಂಗ್. ಅವರು ತಮ್ಮ ತಮ್ಮ ಮಹತ್ ಸಾಧನೆಯ ಕುರಿತಾಗಿ ಚರ್ಚಿಸುತ್ತಿದ್ದರು. ಇಬ್ಬರೂ ತಮ್ಮ ತಂದೆಯೇ ಶ್ರೇಷ್ಠ ಎಂದು ಹೆಮ್ಮೆ ಕೊಚ್ಚಿಕೊಳ್ಳುತ್ತಿದ್ದರು.

ಸಂತಸಿಂಗ್: ನಿನಗೆ ಸುಯೆಸ್ ಕಾಲುವೆಯ ವಿಷಯ ಗೊತ್ತೇನು?

ಬಂಟಸಿಂಗ್: ಹೋ, ಕೇಳಿದ್ದೇನೆ.

ಸಂತಸಿಂಗ್: ಅದನ್ನು ತೋಡಿದವನೇ ನನ್ನ ಅಪ್ಪ! ಒಬ್ಬನೇ ಈ ಕೆಲಸವನ್ನು ಮಾಡಿದ್ದಾನೆ. ಇದಕ್ಕಿಂತ ದೊಡ್ಡ ಸಾಧನೆ ಇನ್ನೇನಿದೆ?

ಬಂಟಸಿಂಗ್: ಅದೇನು ದೊಡ್ಡದಲ್ಲ. ನನ್ನ ಅಪ್ಪ ಏನು ಮಾಡಿದನು ಎಂಬುದನ್ನು ಕೇಳಿದರೆ ನಿನಗೆ ತಲೆ ತಿರುಗಿಹೋಗುತ್ತದೆ.

ಸಂತಸಿಂಗ್: ಏನು ಮಾಡಿದ?

ಬಂಟಸಿಂಗ್: ನೀನು ಮೃತಸಾಗರದ (Dead Sea) ಬಗ್ಗೆ ಕೇಳಿರುವೆಯಾ?

ಸಂತಸಿಂಗ್: ಹೋ, ಬೇಕಾದಷ್ಟು ಕೇಳಿದ್ದೇನೆ.

ಬಂಟಸಿಂಗ್: ಅದನ್ನು ಕೊಂದವನು ನನ್ನ ಅಪ್ಪ!

* * *

ನಮ್ಮನ್ನು ಬಂಧಿಸುವ ಹಗ್ಗದ ದಾರವನ್ನು ನಾವೇ ನೂಲುತ್ತಿರುತ್ತೇವೆ—ನಮಗೇ ಅರಿವಿಲ್ಲದಂತೆ. ನಮ್ಮನ್ನು ಕೂಡಿಹಾಕುವ ಪಂಜರವನ್ನು ನಾವೇ ನಿರ್ಮಿಸುತ್ತೇವೆ. ಆದರೆ ನಮ್ಮ ಎಲ್ಲ ಕಷ್ಟಕ್ಕೂ ನಾವು ಹೊರಜಗತ್ತನ್ನು ದೂರುತ್ತೇವೆ.

ಒಂದು ಶಾಲೆಯಲ್ಲಿ ಮಕ್ಕಳೆಲ್ಲರನ್ನೂ ಸೇರಿಸಿ ಒಂದು ಫೋಟೋ ತೆಗೆಸುವ ಯೋಜನೆ ನಡೆದಿತ್ತು. ಉಪಾಧ್ಯಾಯರು ಫೋಟೋ ತೆಗೆಸುವುದರ ಪ್ರಯೋಜನವನ್ನು ಮಕ್ಕಳಿಗೆ ವಿವರಿಸಿ ಹೇಳುತ್ತಿದ್ದರು:

"ನೋಡಿ ಮಕ್ಕಳೇ, ನೀವು ಮುಂದೆ ದೊಡ್ಡವರಾದಮೇಲೆ ಬೇರೆಯವರಿಗೆ ನೀವು ಶಾಲೆಯಲ್ಲಿದ್ದಾಗ ಹೇಗಿದ್ದಿರಿ ಎಂದು ತೋರಿಸಬಹುದು. ಫೋಟೋದಲ್ಲಿರುವ ನಿಮ್ಮ ಸ್ನೇಹಿತರನ್ನು ತೋರಿಸಿ, 'ಇವನು ಇಂಥವನು, ಇವನು ಈಗ ಇಂಥ ಕೆಲಸ ಮಾಡುತ್ತಿದ್ದಾನೆ,' 'ಇವನು ಇಂಥವನು, ಇವನೀಗ ಅಮೆರಿಕದಲ್ಲಿದ್ದಾನೆ' ಹೀಗೆಲ್ಲ ವಿವರಿಸಿ ಹೇಳಬಹುದು."

ಇಷ್ಟರಲ್ಲಿ ಒಬ್ಬ ಹುಡುಗ ಎದ್ದು ನಿಂತು ಹೇಳಿದ :"ಸಾರ್, 'ಮಧ್ಯದಲ್ಲಿ ಕೂತಿರುವವರು ನಮ್ಮ ಉಪಾಧ್ಯಾಯರು. ಇವರು ಈಗ ತೀರಿಕೊಂಡಿರುವರು' ಎಂಬುದನ್ನೂ ಹೇಳಬಹುದಲ್ಲ?"